# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೨೩೮೬೭
http://www.kasapa.in e-mail : kannadaparishattu@gmail.com


ಕ್ರಮಸಂಖ್ಯೆ : ಕಸಾಪ / **ಪ್ರಕಟಣೆ**/ ೨೦೨೩-೨೪ ದಿನಾಂಕ : ೧೪-೧೨-೨೦೨೩

*ಇವರಿಗೆ*
**ಸಂಪಾದಕರು / ಮುಖ್ಯ ವರದಿಗಾರರು**
.................................................ಬೆಂಗಳೂರು

ಪತ್ರಿಕಾ ಪ್ರಕಟಣೆ

## ಕನ್ನಡದ ಧ್ರುವ ತಾರೆ ಕಾರ್ಯಕ್ರಮದಲ್ಲಿ

## ದಕ್ಷ ಪೋಲೀಸ್ ಅಧಿಕಾರಿ ಶಂಕರ ಬಿದರಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಜನಪ್ರಿಯ ಕಾರ್ಯಕ್ರಮ 'ಕನ್ನಡದ ಧ್ರುವತಾರೆ'ಯಲ್ಲಿ ನಿವೃತ್ತ ಪೋಲೀಸ್ ಮಹಾ ನಿರ್ದೇಶಕರಾದ ಶ್ರೀ ಶಂಕರ ಬಿದರಿಯವರು ಅತಿಥಿಯಾಗಿ ಭಾಗವಹಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜಡಾ, ಮಹೇಶ ಜೋಶಿಯವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದು 16ನೆಯ ಡಿಸಂಬರ್ ಶನಿವಾರ ಸಂಜೆ 5.00 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣ ರಾಜೇಂದ್ರ ಪರಿಷತ್ತಿನ ಮಂದಿರದಲ್ಲಿ ಈ ಕಾರ್ಯಕ್ರಮವು ನಡೆಯಲಿದೆ. ತಾವು ಈ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಸುವುದರ ಜೊತೆಗೆ ಕಾರ್ಯಕ್ರಮಕ್ಕೆ ತಮ್ಮ ವರದಿಗಾರ ಮತ್ತು ಛಾಯಾಗ್ರಾಹಕರನ್ನು ಕಳುಹಿಸಿ ಕೊಡ ಬೇಕಾಗಿ ವಿನಂತಿ.

ದಕ್ಷ ಪೋಲೀಸ್ ಅಧಿಕಾರಿ, ಆಡಳಿತಗಾರ ಎನ್ನಿಸಿ ಕೊಂಡಿರುವ ಶಂಕರ ಮಹಾದೇವ ಬಿದರಿಯವರು ಶಂಕರ ಬಿದರಿ ಬಾಲ್ಯದಿಂದಲೂ ಮಹತ್ವಾಕಾಂಕ್ಷಿಗಳು ದೊಡ್ಡ ದೊಡ್ಡ ಕನಸುಗಳನ್ನು ಇಟ್ಟು ಕೊಂಡವರು. 1978ರಲ್ಲಿ ಭಾರತೀಯ ಪೋಲೀಸ್ ಸೇವೆಗೆ ಆಯ್ಕೆಯಾಗಿ 2012ರ ನಿವೃತ್ತಿಯವರೆಗೂ ಕಾರ್ಯ ನಿರ್ವಹಿಸಿದರು. ಟೆಲಿಫೋನ್ ಅಪರೇಟರ್ ಆಗಿ ವೃತ್ತಿಯನ್ನು ಆರಂಬಿಸಿದವರು ಕರ್ನಾಟಕ ರಾಜ್ಯದ ಪೋಲೀಸ್ ಮಹಾ ನಿರ್ದೇಶಕರಾಗಿ ನಿವೃತ್ತರಾಗಿದ್ದು ಸಾಧನೆಯ ಎತ್ತರವನ್ನು ತೋರಿಸುತ್ತದೆ. ಈ ಕಾರಣದಿಂದಲೇ ಅವರು ತಮ್ಮ ಬದುಕಿನ ಕಾಲದಲ್ಲಿಯೇ ದಂತಕತೆಯಂತೆ ಹೆಸರು ಮಾಡಿದರು.

ಪೋಲೀಸ್ ಅಧಿಕಾರಿಯಾಗಿ ಶಂಕರ ಬಿದರಿಯವರು ಎ.ಎಸ್.ಪಿಯಾಗಿ ಬೆಳಗಾಂ ಮತ್ತು ತಿಪಟೂರಿನಲ್ಲಿ. ಡಿವೈಎಸ್ಪಿಯಾಗಿ ಮಂಡ್ಯ, ಚಿತ್ರದುರ್ಗ, ತುಮಕೂರು, ಬಳ್ಳಾರಿ, ಧಾರವಾಡ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸಿ ದಕ್ಷ ಅಧಿಕಾರಿ ಎಂದು ಹೆಸರನ್ನು ಪಡೆದರು. ಪೋಲೀಸ್ ಇಲಾಖೆಯಲ್ಲಿ ಗಮನಾರ್ಹ ಸುಧಾರಣೆಗಳನ್ನು ತಂದರು.. ಅವರ ಮುಖ್ಯ ಸಾಧನೆ ಎಂದರೆ ವೀರಪ್ಪನ್ ವಿರುದ್ಧ ಕಾರ್ಯಾಚರಣೆ ನಡೆಸಿದ ಟಾಸ್ಕ ಫೋರ್ಸನ ಕಮಾಂಡರ್ ಆಗಿ ಕಾರ್ಯ ನಿರ್ವಹಿಸಿದ್ದು. ಅವರ ಅವಧಿಯಲ್ಲಿ ವೀರಪ್ಪನ್ ತಂಡದ ಸಂಖ್ಯೆ ಇನ್ನೂರರಿಂದ ಐದಕ್ಕೆ ಇಳಿದಿತ್ತು. ಜೆ.ಎಚ್.ಪಟೇಲರು ಮುಖ್ಯಮಂತ್ರಿಗಳಾದಾಗ ಡಿ.ಐ.ಜಿ ಮತ್ತು ಇಂಟಲಿಜೆನ್ಸ್ ಇಲಾಖೆಯ ಐ.ಜಿಯಾಗಿ ಮೂರುವರೆ ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಪೋಲೀಸ್ ಇಲಾಖೆಯ ಹಲವು ಪ್ರಮುಖ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ ಅವರು ಬೆಂಗಳೂರು ನಗರದ ಕಮೀಷನರ್ ಆಗಿ, ರಾಜ್ಯ ಪೋಲೀಸ್ ಆಯುಕ್ತರಾಗಿ ಮಹತ್ವದ ಸೇವೆಯನ್ನು ಸಲ್ಲಿಸಿದರು. ಕೆಳಮಟ್ಟದಿಂದಲೂ ಉನ್ನತ ಹಂತದವರೆಗೂ ಪೋಲೀಸ್ ಇಲಾಖೆಯ ಅಂತರಂಗ ಮತ್ತು ಬಹಿರಂಗವನ್ನು ಅರಿತಿದ್ದ ಅವರು ತಮ್ಮ ದಕ್ಷತೆಯಿಂದ ಇಲಾಖೆಗೆ ಹೊಸ ರೂಪವನ್ನು ನೀಡಿದರು. ತಮ್ಮ ವೃತ್ತಿಯುದ್ದಕ್ಕೂ ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ಹೆಸರು ಮಾಡಿದ ಶಂಕರ ಬಿದರಿಯವರು ಕರ್ನಾಟಕ ಮಾತ್ರವಲ್ಲವೇ ಅಖಿಲ ಭಾರತ ಮಟ್ಟದಲ್ಲಿ ಮಾದರಿ ಪೋಲೀಸ್ ಅಧಿಕಾರಿಯಾಗಿ ಹೆಸರನ್ನು ಪಡೆದರು.

ಬನ್ನಿ ಇದೇ ತಿಂಗಳ 16ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜೇಂದ್ರ ಪರಿಷತ್ತಿನ ಮಂದಿರದಲ್ಲಿ ‘ಕನ್ನಡದ ಧ್ರುವತಾರೆ’ ಯಾಗಿ ಬರಲಿರುವ ಶಂಕರ ಬಿದರಿಯವರ ಸಾಧನೆಯ ಹಾದಿಯನ್ನು ಅವರ ಮಾತಿನಲ್ಲಿಯೇ ಅರಿಯೋಣ.

**ಶ್ರೀಧರಮೂರ್ತಿ ಎನ್.ಎಸ್.**

ಸಂಚಾಲಕರು, ಪ್ರಕಟಣಾ ವಿಭಾಗ

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು